**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ2, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಲಕ್ಷ್ಮಣ ನಾಯ್ಕ |
| ತಂದೆಯ ಹೆಸರು | ಹನುಮಂತ ನಾಯ್ಕ |
| ವಯಸ್ಸು | 43 ವರ್ಷಗಳು |
| ಉದ್ಯೋಗ | ಶಾಮಿಯಾನ |
| ವಾಸ್ತವ್ಯ | ಹೊರಭಾಗ, |

**ಸಾಕ್ಷಿಯನ್ನು ದಿನಾಂಕಃ 28-07-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ಘಟನಾ ಸ್ಥಳದ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ತನ್ನದು ಎಂದು ತಿಳಿಸಿದ್ದರಿಂದ, ಪಂಚನಾಮೆಯನ್ನು ನಿಪಿ-1, ಕಚ್ಚಾ ನಕಾಶೆಯನ್ನು ನಿಪಿ-2 ಮತ್ತು ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ಸದ್ರಿ ಸಹಿಗಳನ್ನು ದಿನಾಂಕ 26-03-2019ರಂದು ಚಾಸಾ-1 ಶ್ರೀ ರಾಘವೇಂದ್ರರವರ ಮನೆಯ ಬಳಿ ಅವರ ಮನೆಯಲ್ಲಿ ಕಳ್ಳತನ ಆಗಿದ್ದಕ್ಕೆ ಸಂಬಂಧಿಸಿದಂತೆ ಮಾಡಿರುತ್ತೇನೆ. ಕಳ್ಳತನ ಆಗಿರುವ ಸ್ಥಳವನ್ನು ಚಾಸಾ-1ರವರು ತೋರಿಸಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-3 ಮತ್ತು ಪೋಲಿಸರು ಇದ್ದರು. ಪೋಲಿಸರು ಸ್ಥಳದಲ್ಲಿ ಸರ್ವೆ ಮಾಡಿ ನಕಾಶೆ ತಯಾರಿಸಿ ಛಾಯಾಚಿತ್ರ ತೆಗೆಸಿರುತ್ತಾರೆ. ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 3 ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾನು ಶಾಮಿಯಾನ ಅಂಗಡಿ ನಡೆಸುತ್ತಿದ್ದು ಚಾಸಾ-1 ನಮ್ಮ ಅಂಗಡಿಯಲ್ಲಿ ಚಾಲಕನ ಕೆಲಸ ಮಾಡುತ್ತಿದ್ದಾರೆ. ನಾನು ಈಗ ಹಳದೀಪುರದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಸ್ವಂತ ಊರು ಕುಮಟಾ ತಾಲೂಕಿನ ಹೊಳೆಗದ್ದೆ, ಹೊರಭಾಗ. ಪಂಚನಾಮೆಗೆ ನನ್ನನ್ನು ಸ್ಥಳಕ್ಕೆ ಚಾಸಾ-1 ಕರೆದಿರುತ್ತಾರೆ. ಪಂಚನಾಮೆಯನ್ನು ಬರೆಯಲು ಪೋಲಿಸರಿಗೆ ಮಾಹಿತಿಯನ್ನು ನಾವೇ ಹೇಳಿರುತ್ತೇವೆ. ಆಭರಣಗಳು ಕಳ್ಳತನವಾದ ಕಪಾಟು ಮನೆಯ ಯಾವ ಭಾಗದಲ್ಲಿ ಇತ್ತು ಎನ್ನುವುದನ್ನು ಹೇಳಿ ಬರೆಸಿರುವುದಿಲ್ಲ.

ರೂ.80,000-00 ಹಣ ಮತ್ತು ಬಂಗಾರದ ಆಭರಣಗಳು ಕಳ್ಳತನವಾಗಿರುತ್ತದೆ. ನಾನು ಹೋದ 5 ನಿಮಿಷದ ನಂತರ ಚಾಸಾ-3 ಬಂದಿರುತ್ತಾರೆ. ಅವರು ಹಳದೀಪುರ ಗ್ರಾಮ ಪಂಚಾಯತಿ ಅಧ್ಯಕ್ಷರು. ಸ್ಥಳಕ್ಕೆ ಶ್ವಾನದಳ ಬಂದಿರುವುದು ನನಗೆ ಗೊತ್ತಿಲ್ಲ.

ನಾನು ಗುನ್ನಾ ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಬರೆಯಲು ನಾವು ಮಾಹಿತಿ ನೀಡಿಲ್ಲ ಮತ್ತು ಪೋಲಿಸರು ಸ್ಥಳದಲ್ಲಿ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ಗುನ್ನೆ ಜಾಗೆಯಲ್ಲಿ ತೆಗೆಸಿಲ್ಲ ಮತ್ತು ಅವುಗಳನ್ನು ಠಾಣೆಯ ಹೊರಭಾಗದಲ್ಲಿ ತೆಗೆಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**